# ಗೋ ವಿಶ್ವ

Cow Universe

गौ विश्व

ವಿರೋಧಿ ಸಂವತ್ಸರ ಪುಷ್ಯ ಡಿಸೆಂಬರ್ ೨೦೦೯ ಸಂಪುಟ–೩ ಸಂಚಿಕೆ–೧೨


ಗುರುವಾಣಿ

## ಅಂತಿಮ ಚರಣದಲ್ಲಿ ವಿಶ್ವ ಮಂಗಳ ಗೋ ಗ್ರಾಮ ಯಾತ್ರೆ



ವಿಶ್ವದ ಮಂಗಳಕ್ಕಾಗಿ ಸಾಗುತ್ತಿರುವ ವಿಶ್ವ ಮಂಗಳ ಗೋ ಗ್ರಾಮ ಯಾತ್ರೆ ತನ್ನ ಅಂತಿಮ ಪಾದವನ್ನು ಸ್ಪರ್ಶಿಸುತ್ತಿದೆ.

ಡಿಸೆಂಬರ್ ಮೊದಲ ವಾರದಲ್ಲಿ ಕರುನಾಡ ಮಣ್ಣಿನಲ್ಲಿ ಸಾಗಿದ ಯಾತ್ರೆ ಅತ್ಯಂತ ಅರ್ಥಪೂರ್ಣವಾಗಿತ್ತು. ಎಷ್ಟರಮಟ್ಟಿಗೆ ಎಂದರೆ, ಮಂಡ್ಯ, ದಾವಣಗೆರೆ, ಹುಬ್ಬಳ್ಳಿಯ ವಿರಾಟ್ ಸಭೆಗಳಲ್ಲಿ ಸಭಾಧ್ಯಕ್ಷತೆ ಬಸವ ಸ್ವಾಮಿ – ಗುಡ್ಡದಮಲ್ಲಾಪುರದ ಪೂಜ್ಯ ಶ್ರೀ ಮೂಕಪ್ಪ ಶಿವಾಚಾರ್ಯ ಸ್ವಾಮಿಗಳದ್ದಾಗಿತ್ತು. ಇನ್ನೇನು ಬೇಕು! ಹಸುವಿಗಾಗಿ ನಡೆಯುತ್ತಿರುವ ಆಂದೋಲನದ ಸಾರಥ್ಯವಹಿಸಲು.

ಮಹಾರಾಷ್ಟ್ರ ಮಂಕಾಗಿದ್ದು ಗುಜರಾತಿನ ವಿರಾಟ್ ಸ್ವರೂಪದಿಂದಾಗಿ ಮರೆಯುವಂತಾಯಿತು. ಗೋವಿಗಾಗಿ ಅದೇನು! ಅದ್ದೂರಿ ಸ್ವಾಗತ, ಕಿಲೋಮೀಟರ್ ಲೆಕ್ಕದಲ್ಲಿ ಅಳೆಯಬಹುದಾದ ವೇದಿಕೆಗಳು, ಎಣಿಸಲು ಅಸದಳವಾದ ಉಪಚಾರ. ಗುಜರಾತಿನ ರಾಜಕೋಟಿನದ್ದು ಮತ್ತೊಂದು ವಿಶೇಷ. ಅಲ್ಲಿನ ಸಭೆಯ ಮುಖ್ಯ ಆಕರ್ಷಣೆ ಗೀರ್ ತಳಿಯ ಭವ್ಯ ಹಸು–ಮುದ್ದು ಮುದ್ದಾದ ಕರು. ಅದಕ್ಕೆ 12 ಲಕ್ಷ ಮೌಲ್ಯ ಕಟ್ಟಿ ಕೊಂಡುಕೊಳ್ಳಲಾಗಿತ್ತು.

ರಾಜಸ್ಥಾನದ್ದು ವಿಶೇಷವಾಗಿ ಹೇಳಲೇಬೇಕಿಲ್ಲ. ಅದು ಗೋ ಸಂರಕ್ಷರ ತವರೂರು. ಪ್ರಸಿದ್ಧ ಮಾತೊಂದಿದೆ. ಹತ್ತು ರಾಜಸ್ಥಾನಿಗಳು ಸೇರಿದರೆ ಸಾಕು, ಅಲ್ಲೊಂದು ಗೋಶಾಲೆ ಶುರು ಆಗುವುದರಲ್ಲಿ ಅನುಮಾನವೇ ಇಲ್ಲ.

ಇನ್ನು ದೇಶದ ರಾಜಧಾನಿ ದೆಹಲಿಯ ಸಮಾಚಾರ. ರಾಜಧಾನಿಯ ಘನತೆಗೆ ತಕ್ಕುದಾಗಿ ಗೋ ಸಂರಕ್ಷಣೆಯ ಸಲುವಾಗಿ ಸಂಘಟನೆ ಕಟ್ಟಲಾಗಿತ್ತು. ಇನ್ನು ಮುಂದಿನ ಪ್ರವಾಸ ಮಧ್ಯಪ್ರದೇಶದ್ದು. ಅಲ್ಲಿಂದ ಮುಂದೆ ನಾಗಪುರದ ಸಮಾರೋಪ.

ಕಾರ್ಯಕ್ರಮದ ಮಹಾಗಮ್ಯ, ಭಾರತದ ಮಹಾಮಹಿಮ ರಾಷ್ಟ್ರಪತಿಗಳಿಗೆ ಯಾತ್ರೆಯಲ್ಲಿ ಸಂಗ್ರಹಿಸಲಾದ ಕೋಟಿಗಟ್ಟಲೆ ಹಸ್ತಾಕ್ಷರ ಸಮರ್ಪಣೆ. ಅದರ ಸಲುವಾಗಿ ಜನವರಿ 30 ರಂದು ದೆಹಲಿಯಲ್ಲಿ ವಿರಾಟ್ ಜನ ಸಮಾವೇಶವನ್ನು ಆಯೋಜಿಸಲಾಗಿದೆ. ಮುಂದಿನ ದಿನ, ಜನವರಿ 31ರಂದು ಹಸ್ತಾಕ್ಷರ ಸಮರ್ಪಣಾ ಕಾರ್ಯಕ್ರಮ.

ಅನಿಸುತ್ತಿದೆ. ಗೋವಿನ ಸಂಕಟ ಮೋಚನೆಯ ಕಾಲ ಸನ್ನಿಹಿತವಾಗುತ್ತಿದೆ. ಗೋವನ್ನು ಭಾರತದ ರಾಷ್ಟ್ರೀಯ ಪ್ರಾಣಿ ಮಾಡಿಯೇ ತೀರುತ್ತೇವೆ. ಗೋಹತ್ಯಾ ನಿಷೇಧಿತ ಕಾನೂನನ್ನು ತರುವಲ್ಲಿ ಕೊನೆಯ ಉಸಿರಿರುವವರೆಗೂ ಪ್ರಯತ್ನ ಮಾಡಲಿದ್ದೇವೆ.

ಸರ್ವರ ಸಹಕಾರದ ನಿರೀಕ್ಷೆಯಲ್ಲಿ.

॥ ವಂದೇ ಗೋ ಮಾತರಮ್ ॥

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಗೋಕರ್ಣ ಮಂಡಲಾಧೀಶ

**ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

ಶ್ರೀರಾಮಚಂದ್ರಾಪುರಮಠ

### ಹೂರಣ


**ಗುರುವಾಣಿ**
**ಪ್ರಶ್ನೋತ್ತರ**
**ಮಾಸದ ಗೋವು: ಪೋನ್ವಾರ್**
**ಆ ಸ್ಥಾನದಲ್ಲಿ ನೀನಿದ್ದರೆ....?**



ಪ್ರಕಾಶನ: IT4COW ಸಂಘಟನೆ
groups.yahoo.com/group/IT4COW

ಅಂತರಜಾಲ ತಾಣ: vishwagou.org, gougram.org

ಸಂಪರ್ಕ: govishva@gmail.com






**ಮಲೆನಾಡು ಗಿಡ್ಡ ತಳಿ ಸಂರಕ್ಷಣೆ ಮತ್ತು ಸಂವರ್ಧನ ಕೇಂದ್ರ, ಭಾನ್ಕುಳಿ**

# ಪ್ರಶ್ನೋತ್ತರ

ಪ್ರ: ಹುಚ್ಚು ಹಸು ರೋಗ ಎಂದರೇನು?

ಉ: ಹಸುಗಳು ನೈಸರ್ಗಿಕವಾಗಿ ಸಸ್ಯಾಹಾರಿ ಪ್ರಾಣಿಗಳು. ಇಂಗ್ಲೆಂಡಿನ ಗೋಮಾಂಸ ಉತ್ಪಾದನಾ ಕಂಪನಿಗಳು , ಕಸಾಯಿ ಖಾನೆಗಳಲ್ಲಿ ಅಳಿದುಳಿದ ಮಾಂಸ , ಕರುಳು ಮುಂತಾದ ವ್ಯರ್ಥ ಪದಾರ್ಥಗಳನ್ನು ಬಿಸಾಡುವ ಬದಲು, ದನಗಳಿಗೆ ಮೇವಿನ ರೂಪದಲ್ಲಿ ತಿನ್ನಿಸತೊಡಗಿದರು. ಸಸ್ಯಾಹಾರಿ ಪ್ರಾಣಿಗಳನ್ನು ಬಲವಂತವಾಗಿ ಮಾಂಸಾಹಾರಿ ಪ್ರಾಣಿಗಳನ್ನಾಗಿಸಿದರು. ಪ್ರಕೃತಿ ಮುನಿಯಿತು. ಈ ಹಸುಗಳಿಗೆ ಹುಚ್ಚು ಹಸು ರೋಗ ತಗುಲಿತು. ಅವುಗಳ ಮಾಂಸ ತಿಂದ ಮನುಷ್ಯರಿಗೂ ರೋಗ ತಗುಲಿತು. ಐರೋಪ್ಯ ದೇಶಗಳು ಇಂಗ್ಲೆಂಡಿನ ಗೋಮಾಂಸ ಆಮದಿನ ಮೇಲೆ ನಿಷೇಧ ಹೇರಿದವು. ಇಂಗ್ಲೆಂಡ್ ಲಕ್ಷಾಂತರ ಹಸುಗಳನ್ನು ಕೊಂದು ಹಾಕಿತು.

ಪ್ರ: ರಾಷ್ಟ್ರೀಯ ಜಾನುವಾರು ಆಯೋಗದ ಸಲಹೆಗಳೇನು?

ಉ: ಆಗೋಸ್ಟ್ 2001ರಲ್ಲಿ ಭಾರತದ ಆರ್ಥಿಕತೆಯಲ್ಲಿ ಗೋವುಗಳ ಪ್ರಾಮುಖ್ಯತೆಯನ್ನು ಅಧ್ಯಯನ ಮಾಡಿ ಅಗತ್ಯ ಕ್ರಮಗಳ ಬಗ್ಗೆ ವರದಿ ನೀಡಲು ಭಾರತ ಸರಕಾರವು 17 ಜನರ ಪರಿಣಿತರ "ರಾಷ್ಟ್ರೀಯ ಜಾನುವಾರು ಆಯೋಗ" ವನ್ನು ಸ್ಥಾಪಿಸಿತು. ಅದರ ಸಲಹೆಗಳೆಂದರೆ:

1. ಗೋವಂಶದ ಪ್ರಾಣಿಗಳ (ಕರುಗಳು, ಎತ್ತುಗಳು, ಹೋರಿಗಳು) ಹತ್ಯೆ ನಿಷೇಧವನ್ನು ಸಂವಿಧಾನದ ಮೂಲಭೂತ ಹಕ್ಕುಗಳಲ್ಲಿ ಸೇರಿಸಬೇಕು.

2. ಪಾರ್ಲಿಮೆಂಟು ಬಿಗಿಯಾದ ಸಂಪೂರ್ಣ ಗೋಹತ್ಯಾ ನಿಷೇಧ ಕಾಯಿದೆಯನ್ನು ಜಾರಿಗೊಳಿಸಬೇಕು. ಹಾಗೂ ಗೋವುಗಳನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸಾಗಿಸುವುದನ್ನು ನಿಷೇಧಿಸಬೇಕು

3. ಕೇಂದ್ರದ ಗೋಹತ್ಯಾ ನಿಷೇಧ ಕಾಯ್ದೆಯು ಎಲ್ಲಾ ರಾಜ್ಯಗಳಿಗೂ ಕಡ್ಡಾಯವಾಗಿ ಅನ್ವಯವಾಗಬೇಕು. ಗೋಹತ್ಯೆಯನ್ನು ಜಾಮೀನು ರಹಿತ ಸಂಜ್ಞೆಯ (ಕಾಗ್ನಿಸಬಲ್) ಅಪರಾಧ ಎಂದು ಪರಿಗಣಿಸಬೇಕು.

**– ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ) (ಸಂಗ್ರಹ: ಉಲ್ಲಾಸ್ ಸಿ. ಕೆ)

# ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ 27, 2007ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ–ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು 27ನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ–ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ – govishva@gmail.com

ಮಾಸದ ಗೋವು

# ಪೋನ್ವಾರ್

**ಉತ್ತರ ಪ್ರದೇಶದಲ್ಲಿ ಕೆಲಸಗಾರ ತಳಿ ಎಂದು ಖ್ಯಾತವಾದ ತಳಿ ಪೋನ್ವಾರ್ ಈ ತಿಂಗಳ ಮಾಸದ ಗೋವು. ಚುರುಕು ನಡಿಗೆಗೆ ಈ ತಳಿ ಪ್ರಖ್ಯಾತ. ಸ್ವಲ್ಪ ಅಂಜುಕುಳಿ ಕೂಡ. ಅತಿ ತುಂಟತಳಿಯೆಂಬ ಬಿರುದು ಕೂಡ ಇವುಗಳಿಗಿದೆ. ಅಪರೂಪದ ರೋಗ ನಿರೋಧಕತೆಗೆ ಪೋನ್ವಾರ್ ತಳಿ ಪ್ರಸಿದ್ಧ.**

ಫಿಲಿಭಿತ್ ಜಿಲ್ಲೆ ಪುರಾನ್‌ಪುರ್ ತಾಲೂಕು ಪೋನ್ವಾರ್ ತಳಿಯ ತವರು. ನಿರ್ದಿಷ್ಟವಾಗಿ ಹೇಳಬೇಕೆಂದರೆ ಮೈನಾಕೋಟ್, ಮಜ್ಹರಾ, ಭಿರ್ಕೆರಾ ಊರುಗಳು ಈ ಅಪೂರ್ವತಳಿಯನ್ನು



**ಪೋನ್ವಾರ್ -ಉತ್ತರ ಪ್ರದೇಶ**

ಸೃಜಿಸಿದವು ಎನ್ನಬಹುದು. ಪೋನ್ವಾರ್ ತಳಿ ಕೆಲಸಗಾರ ತಳಿಯ ವಿಭಾಗಕ್ಕೆ ಸೇರುತ್ತದೆ. ಸಣ್ಣ ಗಾತ್ರದ ತಳಿಯಾಗಿ ವರ್ಗೀಕರಿಸಬಹುದಾದ ಪೋನ್ವಾರ್ ತಳಿಯಲ್ಲಿ ಗುಡ್ಡಗಾಡು ಹಾಗೆಯೆ ಬಯಲು ಪ್ರದೇಶದ ತಳಿಗಳ ಲಕ್ಷಣಗಳೆರೆಡೂ ಮೇಳೈಸಿವೆ ಅನ್ನುತ್ತಾರೆ ತಜ್ಞರು. ಚುರುಕಿನ ನಡಿಗೆಯೇ ಪೋನ್ವಾರ್ ತಳಿಯ ವಿಶೇಷ. 800ರಿಂದ ಸಾವಿರ ಕಿಲೊನಷ್ಟು ತೂಕವನ್ನು ಒಂದೆ ಒಂದು ಏದುಸಿರಿಲ್ಲದೆ ಹತ್ತು ಕಿಮಿಯವರೆಗೆ ಸುಲಭವಾಗಿ ಎಳೆಯಬಲ್ಲವು ಪೋನ್ವಾರ್.

ಪೋನ್ವಾರ್ ತಳಿಯು ಅಭಿವೃದ್ಧಿ ಹಾಗು ಸಂರಕ್ಷಣೆಯಾಗುತ್ತಿರುವುದು ಥಾರು ಬುಡಕಟ್ಟು ಜನಾಂಗದವರಿಂದ. ಪೋನ್ವಾರ್ ತಳಿಯನ್ನು ಇವರು 'ಕಾಬ್ರಿ' (ಕನ್ನಡದಲ್ಲಿ 'ಬಹುವರ್ಣೀ' ಎನ್ನಬಹುದೇನೊ)ಎಂದೂ ಕರೆಯುತ್ತಾರೆ. ಹೈನುಗಾರಿಕೆಯೆ ಥಾರು ಜನಾಂಗದವರ ಕುಲಕಸುಬು. ಒಂದು ಜನಾಂಗ ಇದನ್ನೇ ನಂಬಿ ಶತಮಾನಗಳಿಂದ ಬದುಕುತ್ತಿದೆಯೆನ್ನುವ ಅಂಶವೇ ಈ ತಳಿಯ ಉಪಯುಕ್ತತೆಯನ್ನು ಸಾರಿಬಿಡುತ್ತದೆ.





ಪೋನ್ವಾರ್ ತಳಿಯು ಮುಖ್ಯವಾಗಿ ಸಾಕಲ್ಪಡುತ್ತಿರುವ ಪ್ರದೇಶಗಳಲ್ಲಿ ಸದಾ ಮಂಜು ಮುಸುಕಿದ ವಾತಾವರಣ. ವಾರ್ಷಿಕ ಅಜಮಾಸು 125ರಿಂದ 165 ಸೆಂ.ಮಿ. ಮಳೆ. ದುರ್ಗಮವಾದ ಅರಣ್ಯವೇ ಇವುಗಳ ಮೇವುತಾಣ. ಮಳೆಯ ಪ್ರಮಾಣ ಕಡಿಮೆಯಾದ್ದರಿಂದ ಇಲ್ಲಿ ಬೆಳೆಯುವ ಆಹಾರ ಬೆಳೆಗಳ ಉಪ ಉತ್ಪನ್ನಗಳು ವರ್ಷವಿಡಿ ಮೇವಾಗಲಾರವು. ಹೀಗಾಗಿಯೆ ಇಲ್ಲಿ ಕಟ್ಟಿ ಸಾಕುವುದಾಗಲೀ, ಹಟ್ಟಿಗೇ ಹುಲ್ಲು ತಂದು ಹಾಕುವ ಸಾಂಪ್ರದಾಯವಿಲ್ಲ. ಇಲ್ಲಿ ಇವು ಸದಾ ಮಾಂಸಾಹಾರೀ ಪ್ರಾಣಿಗಳ ಭಯದಲ್ಲೇ ಮೇವುಣ್ಣಬೇಕಾದ ಹಿನ್ನೆಲೆಯಲ್ಲಿ ಇವುಗಳು ಮಂದೆಯಲ್ಲಿಯೆ ಇರುತ್ತವೆ. ಸ್ವಲ್ಪ ಅಂಜುಕುಳಿ ಕೂಡ. ಅತಿ ತುಂಟತಳಿಯೆಂಬ ಬಿರುದು ಕೂಡ ಇವುಗಳಿಗಿದೆ. ಇವುಗಳು ಪ್ರಾಯಕ್ಕೆ ಬರುವುದು ಕೂಡ ಕೊಂಚ ತಡವಾಗಿ.

ಪೋನ್ವಾರ್ ತಳಿಗಳದ್ದು ಸಾಮನ್ಯವಾಗಿ ಬಿಳೀ ಪಟ್ಟೆಗಳಿಂದ ಕೂಡಿದ ಬೂದು ಅಥವಾ ಕಪ್ಪು ಬಣ್ಣ. ಪುಟ್ಟ ಉದ್ದನೆಯ ಮುಖ. ಅದಕ್ಕೆ ತಕ್ಕನೆಯ ಚಿಕ್ಕ ಉರುಟು ಕಿವಿ, ಆದರೆ ದೊಡ್ಡ ಕಣ್ಣುಗಳು, ಮಧ್ಯಮ ಗಾತ್ರದ ಕೊಂಬು ಇವು ಪೋನ್ವಾರ್ ತಳಿಯ ಉಪಲಕ್ಷಣಗಳು. ಪ್ರತಿದಿನ ಸುಮಾರು ಅರ್ಧದಿಂದ 2 ಕಿಲೊಗ್ರಾಂ ಅಷ್ಟು ಹಾಲು ನೀಡುತ್ತವೆ.

ಅಪರೂಪದ ರೋಗ ನಿರೋಧಕತೆಗೆ ಪೋನ್ವಾರ್ ತಳಿ ಪ್ರಸಿದ್ಧ. ಆದರೆ ಇವುಗಳಲ್ಲಿ ಮಾನವನ ಸ್ವಾರ್ಥವೆಂಬ ರೋಗಕ್ಕೆ ಔಷಧವಿಲ್ಲ. ಹೀಗಾಗಿ ಅತಿ ವೇಗವಾಗಿ ಸಂಕರಕ್ಕೀಡಾಗುತ್ತಿರುವ ತಳಿಗಳಲ್ಲಿ ಇದಕ್ಕೆ ಅಗ್ರಸ್ಥಾನ!

**– ಮಧುಕೇಶ ದೊಡ್ಡೇರಿ**

**ಮೂಲ: ಉತ್ತರ ಪ್ರದೇಶ**
**ವಿಭಾಗ: ಕೆಲಸಗಾರ**
**ಮಧ್ಯಮ ಗಾತ್ರ**
**ಬಣ್ಣ: ಬಿಳಿ ಪಟ್ಟೆಗಳಿಂದ ಕೂಡಿದ ಬೂದು ಅಥವಾ ಕಪ್ಪು ಬಣ್ಣ**
**ಮುಖ: ಉದ್ದನೆಯ ಮುಖ, ಉರುಟು ಕಿವಿ,**
**ಕೊಂಬು: ಮಧ್ಯಮ ಗಾತ್ರ**
**ಕಣ್ಣು: ದೊಡ್ಡ ಕಣ್ಣು**



ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿಯವರ ಬ್ಲಾಗ್‌ನಿಂದ

# ಆ ಸ್ಥಾನದಲ್ಲಿ ನೀನಿದ್ದರೆ....?

ಹೇ ಮಾನವಾ..!!

ಬೇರೆಯವರೊಂದಿಗೆ ನೀನು ನಡೆದುಕೊಳ್ಳುತ್ತಿರುವ ರೀತಿ ಸರಿಯೋ – ತಪ್ಪೋ ಎನ್ನುವುದನ್ನು ಹೇಗೆ ತಿಳಿದುಕೊಳ್ಳುತ್ತೀಯೆ?

ಉತ್ತರ ಕ್ಲಿಷ್ಟವೇನೂ ಅಲ್ಲ..

ಒಂದು ವೇಳೆ ನಿನ್ನೊಡನೆ ಬೇರೆಯವರು ಹಾಗೆ ನಡೆದುಕೊಂಡರೆ ನಿನಗೆ ಹೇಗನಿಸುತ್ತದೆ – ಎಂಬುದನ್ನು ಕಲ್ಪಿಸಿಕೊಂಡರಾಯಿತು..

ಈ ಕುರಿತು ಬಲ್ಲವರೇನು ಹೇಳುತ್ತಾರೆಂಬುದನ್ನು ಗಮನಿಸು..

॥ **ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್** ॥

(ಯಾವುದು ನಿನಗೆ ಪ್ರತಿಕೂಲವೋ, ಅದನ್ನು ಬೇರೆಯವರಿಗೆ ಮಾಡಕೂಡದು!)

ಸೀತೆಯನ್ನಪಹರಿಸುವ ರಾವಣನಿಗೆ ಜಟಾಯು ಹೇಳಿದ್ದು –

"ಒಂದು ವೇಳೆ ಮಂಡೋದರಿಯನ್ನು ಪರಪುರುಷರು ಯಾರಾದರೂ ಅಪಹರಿಸಿದರೆ ನಿನಗೆ ಹೇಗನಿಸಬಹುದು?"

ಸರ್ವದೇವಮಯೀ,

ಈ ಮಾತುಗಳ ಹಿನ್ನೆಲೆಯಲ್ಲಿ, ಗೋವುಗಳ ಬಗ್ಗೆ ನೀನು ನಡೆದುಕೊಂಡ ರೀತಿ ಎಷ್ಟು ಸರಿ – ಅಥವಾ ಎಷ್ಟು ತಪ್ಪು ಎನ್ನುವುದನ್ನು ನಿರ್ಣಯಿಸುವೆಯಾ?

ಎಲ್ಲಿ ನೋಡೋಣ?

ಒಂದೇ ಒಂದು ಬಾರಿ –ಗೋವಿನ ಸ್ಥಾನದಲ್ಲಿ ನಿಂತುಕೋ!

ಎಚ್ಚರ!! ಎದೆ ಗಟ್ಟಿಯಿರಲಿ!!!

ಅದೋ ನೋಡು. ನಿನ್ನ ಹುಟ್ಟು ತಂದೆ–ತಾಯಿಗಳ ದಾಂಪತ್ಯದ ಆನಂದದ ಫಲವಾಗಿ ಆಗಲಿಲ್ಲ! ಬದಲಿಗೆ, ತಂದೆಯ ಮುಖವನ್ನೇ ನೋಡದ ತಾಯಿಗೆ ಮಾನವರು ಚುಚ್ಚಿದ ಚುಚ್ಚುಮದ್ದಿನ ಫಲವಾಗಿ ಆಯಿತು. ಛೆ!! ಹುಟ್ಟೇ ಕೃತ್ರಿಮವಾಯಿತಲ್ಲವೇ?

(ಜೀವಿಯ ಹುಟ್ಟು ತಂದೆ ತಾಯಿಗಳು ಅನುಭವಿಸುವ ಅದ್ವೈತ–ಆನಂದದ ಮೂಲಕವೇ ಆಗಬೇಕೆಂಬುದು ತತ್ವಜ್ಞರ ಅಭಿಮತ.

ಹಾಗಿದ್ದಲ್ಲಿ ಮಾತ್ರ ಜೀವಿಯ ಬದುಕು ಆನಂದದಲ್ಲಿ ಬೆಳೆದು ಅದ್ವೈತದಲ್ಲಿ ಮುಗಿಯಲು ಸಾಧ್ಯ. ಬೀಜದಲ್ಲಿಲ್ಲದ್ದು ಹೇಗೆ ತಾನೇ ಫಲದಲ್ಲಿ ಬಂದೀತು? ಬದುಕಿನ ಬೀಜವೇ ಕೃತ್ರಿಮವಾದರೆ, ಬದುಕಿನ್ನೇನಾದೀತು?)

ಹುಟ್ಟುವ ಮೊದಲೇ ನಿನಗೆ ಸಾವಿನ ಭಯ! ಮಾನವರೆಂಬ ದಾನವರು ನೀನಿನ್ನೂ ಭ್ರೂಣವಾಗಿರುವಾಗಲೇ ಅಮ್ಮನ ಹೊಟ್ಟೆಗೆ ಚೂರಿಯಿಟ್ಟಾರು! ನಿನ್ನ ಚರ್ಮ ಸುಲಿದು **ಜಂಬದ ಚೀಲ** (Vanity Bag) ಮಾಡಿಕೊಂಡಾರು! (ಈ ಮಾನವರ ಶೋಕಿಗೆ ಜೀವ ಹಿಂಸೆಯೇ ಬೇಕೇ?)

ಹುಟ್ಟಿದ ಮೇಲೆಯೂ ಸುಖವಿಲ್ಲ ನಿನಗೆ! ಒಡನೆಯೇ ಅಮ್ಮನಿಂದ ನಿನ್ನನ್ನು ಬೇರೆ ಮಾಡುವರು. ವಾತ್ಸಲ್ಯದ ಮಳೆಗರೆಯುವ, ತನ್ನ ಅಮೃತ ದೃಷ್ಟಿಯಿಂದಲೇ ತನ್ನ ಬಳಿ ಕರೆಯುವ ಅಮ್ಮನೆಡೆಗೆ ಧಾವಿಸುವ ನಿನ್ನನ್ನು, ಕಟ್ಟಿ ಹಿಡಿದೆಳೆಯುವರಲ್ಲವೇ? ಅಮ್ಮನೆದುರು ನಿನ್ನನ್ನು ಕಟ್ಟಿ, ನಿನಗೆ ಸಲ್ಲಬೇಕಾದ ಹಾಲನ್ನು ಮಾನವರು ಕಿತ್ತುಕೊಳ್ಳುವಾಗ ಹೇಗನಿಸುತ್ತದೆ ನಿನಗೆ? (ಪೋಷಣೆ ಸರಿಯಾಗಿದ್ದರೆ ಕರುವಿಗೆ ಸಾಕಾಗಿ ಮನುಷ್ಯರ ಉಪಯೋಗಕ್ಕೆ ಮಿಗುವಷ್ಟು ಹಾಲು ಗೋವಿನಲ್ಲಿ ಇರುತ್ತದೆ!)

ನೀನು ಬೆಳೆದಂತೆ ಬಂಧನವೂ ಬೆಳೆಯುತ್ತದೆ ನೋಡು. ಈಗ ನಿನಗೆ ಸ್ವೇಚ್ಛಾ ಸಂಚಾರದ ಸ್ವಾತಂತ್ರ್ಯವೂ ಇಲ್ಲ. ಹಗ್ಗವೇ ನಿನ್ನ ಬದುಕಾಯಿತೇ?

ಹಸಿವಾದಾಗ ತಿನ್ನುವುದು, ಬಾಯಾರಿಕೆಯಾದಾಗ ಕುಡಿಯುವುದು –ಜೀವಸಹಜ. ಆದರೆ, 'ದೇವರು ಕೊಟ್ಟರೂ ಪೂಜಾರಿ ಕೊಡ' ಎಂಬಂತೆ, ದೈವದತ್ತವಾದ ನಿನ್ನ ಈ ಹಕ್ಕನ್ನು ಮಾ(ದಾ)ನವರು ಕಸಿದರು ನೋಡು! ಅವರು ಹಾಕಿದ್ದನ್ನು ನೀನು ತಿನ್ನಬೇಕು ಮತ್ತು ಹಾಕಿದಾಗ ತಿನ್ನಬೇಕು. ನೀರು ಕೂಡಾ ಹಾಗೆಯೇ. ಮಾನವರು ಕೊಟ್ಟರುಂಟು. ಕೊಟ್ಟಾಗ ಉಂಟು!

ಅನುಪಮವಾದ ಕುಲ ನಿನ್ನದು. ಮಾನವ ಜೀವನಕ್ಕೆ ಬೇಕಾದ ಉತ್ತಮೋತ್ತಮ ವಸ್ತುಗಳನ್ನೀಯುವುದರಲ್ಲಾಗಲೀ, ಪ್ರೇಮ ಸೇವೆ,



ತ್ಯಾಗಗಳಲ್ಲಾಗಲೀ ಈ ಜಗದಲ್ಲಿ ನಿನ್ನ ಕುಲವನ್ನು ಯಾರೂ ಸರಿಗಟ್ಟಲಾರರು! ಹೀಗಿದ್ದರೂ, ನೀ ಬೆಳೆದು ನಿಂತಾಗ, ನಿನ್ನ ದೇಶದ ಘನ ಸರ್ಕಾರದ ಇಲಾಖೆಗಳು ನಿನ್ನ ಕುಲವನ್ನು ಉಪಯೋಗಕ್ಕೆ ಬಾರದ್ದೆಂದು ತಿರಸ್ಕರಿಸಿದವು!

ಚಿನ್ನದ ಮುಂದೆ ಪ್ಲಾಸ್ಟಿಕ್ಕಿನಂತೆ, ನಿನಗೇನೇನೂ ಸಾಟಿಯಲ್ಲದ, ಸತ್ವಹೀನವಾದ, ರೋಗಮಯವಾದ, ವಿದೇಶೀ ತಳಿಗಳನ್ನು ತಂದು ನಿನಗೆ ಚುಚ್ಚಲಾಯಿತು! ಮೊದಲೇ ನಿನಗೆ ಬೇರಾವ ಸುಖವೂ ಇಲ್ಲ, ಇದರಿಂದಾಗಿ ಜೀವಸಹಜವಾದ ದಾಂಪತ್ಯ ಸುಖವನ್ನೂ ಕಳೆದುಕೊಂಡೆ. ಸೃಷ್ಟಿಯಲ್ಲಿಯೇ ಸರ್ವಶ್ರೇಷ್ಠವಾದ ನಿನ್ನ ಕುಲವೂ ಕಲುಷಿತವಾಗಿ ಹೋಯಿತು. (ನಾಳೆ ಈ ಘನ ಸರಕಾರಗಳು ಭಾರತೀಯ ಮನುಷ್ಯರ ತಳಿ ನಿರುಪಯೀಗಿಯೆಂದೂ, ಯುರೋಪಿನ ಬಿಳಿಮನುಷ್ಯರ ತಳಿಗಳೇ ಶ್ರೇಷ್ಠವೆಂದು ಸಾರಿದರೆ!

ಭಾರತೀಯರಲ್ಲಿ ಪರಸ್ಪರ ವಿವಾಹವನ್ನು ನಿಷೇಧಿಸಿ, ಯುರೋಪಿನಿಂದ ಕೃತಕ ಗರ್ಭಧಾರಣೆಗೆ ಆಜ್ಞೆ ಹೊರಡಿಸಿದರೆ?!

ಹಳ್ಳಿ ಹಳ್ಳಿಗಳಲ್ಲಿ ಕೃತಕ ಗರ್ಭಧಾರಣಾ ಕೇಂದ್ರಗಳನ್ನು ತೆರೆದರೆ!

ಈಗಿನಿಂದಲೇ ಸಿದ್ಧರಾಗುವುದು ಒಳಿತು!)

ದೇವರು ನಿನಗೆ ಮೂಗು ಕೊಟ್ಟಿದ್ದು ಪ್ರಾಣವಾಯುವಿನ ಸಂಚಾರಕ್ಕೆಂದು, ಆದರೆ, ಮಾನವ ಅದನ್ನು ಬಳಸಿದ್ದು ನಿನ್ನ ಪ್ರಾಣ ಪೀಡನೆಗೆಂದು! ನಿನ್ನ ಮೂಗಿನೊಳಗೆ ರಂಧ್ರ ಕೊರೆದು –ಅಲ್ಲಿ ಒರಟು ಬಳ್ಳಿ ಸುರಿದು, ಬಾರಿ ಬಾರಿಗೂ ಹಿಡಿದೆಳೆಯುವಾಗ

ದೇವರು ಏಕಾದರೂ ಈ ಮೂಗು ಕೊಟ್ಟನೋ? ಎಂದೆನಿಸಿರಬಹುದಲ್ಲವೇ? (ಗೋವುಗಳಿಗೆ ಪ್ರಥಮವಾಗಿ ಮೂಗು ಸುರಿಯುವಾಗ, ಮಾನವನಿಗೆ ಕಿವಿ ಚುಚ್ಚುವಾಗ ಆಗುವಷ್ಟೇ ನೋವಾಗುವುದು. ಹೆಚ್ಚು ಹಿಂಸೆಯಾಗುವುದು, ಮತ್ತೆ ಅದನ್ನು ಬಲವಾಗಿ ಹಿಡಿದೆಳೆಯುವಾಗ)

ಅದೆಷ್ಟು ಬೈಗುಳ–ಪೆಟ್ಟುಗಳನ್ನು ನೀನು ತಿಂದೆಯೋ. ಅಷ್ಟೇ ಹುಲ್ಲು–ಹಿಂಡಿಗಳು ನಿನಗೆ ತಿನ್ನಲು ಸಿಕ್ಕಿದ್ದರೆ? ಆದರೆ, ಚಳಿ–ಮಳೆ–ಗಾಳಿ–ಬಿಸಿಲುಗಳಲ್ಲಿ, ಹಸಿವು–ಬಾಯಾರಿಕೆ–ಬಳಲಿಕೆಗಳೊಡನೆ, ದಿನವಿಡೀ, ಜೀವನವಿಡೀ, ದುಡಿತ ತಪ್ಪಲಿಲ್ಲ.

ಶೋಷಣೆಯುಂಟು, ಪೋಷಣೆಯಿಲ್ಲ!

ಬಾಣಲೆಯಿಂದ ಬೆಂಕಿಗೆ ಎನ್ನುವ ಗಾದೆ ನಿನಗಾಗಿಯೇ ಹುಟ್ಟಿಕೊಂಡಿದ್ದೋ ಏನೋ. ಮಾನವನಿಗಾಗಿಯೇ ದುಡಿದುಡಿದು ಮುದಿಯಾದ ಮೇಲೆ ಮೂರು ಕಾಸಿಗೆ ನಿನ್ನನ್ನು ಮಾರಿದ್ದು ಕಟುಕರಿಗೆ! ಜೀವನ ಹಿಂಸೆಯಿಂದ ನಿನ್ನ ಪ್ರಯಾಣ ಮೃತ್ಯು ಹಿಂಸೆಯೆಡೆಗೆ! ಎಷ್ಟೇ ಕೆಟ್ಟವನಾದರೂ, ಸಾಯುವ ವ್ಯಕ್ತಿಗೆ ಕೊಂಚವಾದರೂ ಸುಖ ನೆಮ್ಮದಿಗಳನ್ನು ನೀಡಬೇಕಾದದ್ದು ಮಾನವಧರ್ಮ. ಒಳ್ಳೆಯತನಕ್ಕೆಲ್ಲ 'ಮಾನವತೆ'ಯೆಂಬ ಬಿರುದು ಕೊಡುವ ಮಾನವ, ನಿನ್ನ ವಿಷಯದಲ್ಲಿ ಈ ಧರ್ಮವನ್ನೂ ಗಾಳಿಗೆ ತೂರಿದನಲ್ಲವೆ!? ಸಾಮಾನುಗಳನ್ನು ಸಾಗಿಸುವಾಗ ಅವುಗಳಿಗೆ ಧಕ್ಕೆಯಾಗದಂತೆ ಜಾಗ್ರತೆವಹಿಸುತ್ತಾರೆ. ಆದರೆ, ಜೀವ ಸೆಲೆ ಹರಿದಾಡುವ ನಿನ್ನನ್ನು ಮಾನವ ಮೃತ್ಯುವಿನ ಮನೆಗೆ ಸಾಗಿಸಿದ್ದು ಜಡವಸ್ತುಗಳಿಂತಲೂ ಕಳಪೆಯಾಗಿ. ಅಂಗಭಂಗವೆಷ್ಟಾಯಿತೋ! ಹೃದಯವೆಷ್ಟು ಚೂರಾಯಿತೋ!

ಹೃದಯ ಜೀವಿಯ ವ್ಯಥೆ ಬುದ್ಧಿಜೀವಿಗೆ ಹೇಗೆ ತಾನೇ ಗೊತ್ತಾಗಬೇಕು? ಬದುಕಿಡೀ ಅನ್ನವಿತ್ತ ನಿನಗೆ ಸಾಯುವ ಮೊದಲು ದಿನಗಟ್ಟಲೆ ಉಪವಾಸವೇ! ಹೆತ್ತ ತಾಯಿಯ ಎದೆ ಒಣಗಿದ ಮೇಲೆ ಜೀವನವಿಡೀ ಹಾಲಿನ ಹೊಳೆ ಹರಿಸಿದ ನಿನ್ನ ಕೊರಳನ್ನು ಸ್ವಲ್ಪಸ್ವಲ್ಪವೇ ಕೊಯಿದು, ರಕ್ತ ಶೇಖರಿಸುವ ರಾಕ್ಷಸ ಮನಸ್ಸೇ.

ಮಾನವರ ಹೊಟ್ಟೆ ಹೃದಯಗಳನ್ನು ತಂಪಾಗಿರಿಸುವ ನಿನ್ನನ್ನು ಕೊನೆಯಲ್ಲಿ ಕುದಿನೀರಲ್ಲಿ ಬೇಯಿಸುವ ಪರಿಯೇ! ಇನ್ನೂ ಬದುಕಿರುವಾಗಲೇ ಚರ್ಮ ಸುಲಿಯುವಾಗ ಪೀಡೆ ತನ್ನ ಪರಾಕಾಷ್ಠೆಯನ್ನು ಮುಟ್ಟಿತೇ!

ಸ್ವರ್ಗವನ್ನು ಭೂಮಿಗಿಳಿಸುವ ನಿನಗೆ ಬದುಕೇ ನರಕ, ಮೃತ್ಯುವೇ ಮುಕ್ತಿ! ಹೇ ಮಾನವಾ, ಕ್ಷಣ ಮಾತ್ರ ನೀನು ಗೋವಿನ ಸ್ಥಾನದಲ್ಲಿ ನಿಂತು ನೋಡಿದೆಯಲ್ಲವೇ? ತಿಳಿದುಕೋ. ಇದು ಸಿಂಧುವಿನಲ್ಲಿ ಬಿಂದು ಮಾತ್ರ! ನೆನಪಿಡು, ದೇವರು ನಿನ್ನಲ್ಲಿ ಹೇಗೆ ನೆಲೆಸಿರುವನೋ ಹಾಗೆಯೇ ಎಲ್ಲ ಜೀವಗಳಲ್ಲಿಯೂ ನೆಲೆಸಿರುವನು. ಜೀವವು ನಿನ್ನಲ್ಲಿ ಹೇಗಿದೆಯೋ,ಹಾಗೆಯೇ ಎಲ್ಲ ಜೀವಿಗಳಲ್ಲಿಯೂ ಇದೆ.

ನಿನ್ನ ಒಂದೊಂದು ಅಂಗವನ್ನೂ ನಡೆಸುತ್ತಿರುವುದು ಕಣ್ಣಿಗೆ ಮೀರಿದ ದೈವೀ ಶಕ್ತಿಗಳು. ಅದು ಎಲ್ಲರಲ್ಲಿಯೂ ಹಾಗೆಯೇ!

ನೀನು ಇನ್ನೊಂದು ಜೀವದ ಒಂದೊಂದು ಅಂಗವನ್ನು ಘಾಸಿ ಮಾಡುವಾಗಲೂ ಘಾಸಿಯಾಗುವುದು ಅಲ್ಲಿ ಹುದುಗಿರುವ ದೈವೀ ಶಕ್ತಿಗಳಿಗೆ! ನೋವಾಗುವುದು ಜೀವಕ್ಕೆ! ಕ್ಷೋಭೆಯಾಗುವುದು ಪರಮಾತ್ಮನಿಗೆ! ಇವೆಲ್ಲವೂ ನಿನ್ನಲ್ಲಿ ಪ್ರತಿಫಲಿಸುವುದು ಅನಿವಾರ್ಯ.

ಕಾರಣ, ಈ ದೈವೀ ಶಕ್ತಿಗಳು, ಈ ಜೀವ – ದೇವ – ಎಲ್ಲವೂ ನಿನ್ನಲ್ಲಿಯೂ ನೆಲೆಸಿರುವುದು.

**"ಪ್ರತಿಯೊಂದು ಕ್ರಿಯೆಗೊಂದು ಪ್ರತಿಕ್ರಿಯೆ"**

ಅದು ಸೃಷ್ಟಿ ನಿಯಮ.

**ನಿನ್ನೊಡಹುಟ್ಟುಗಳೇ ಆದ ಜಗದ ಜೀವರಾಶಿಗಳಿಗೆ ನೀನೇನು ಕೊಟ್ಟೆಯೋ, ಅದು ಒಂದಕ್ಕೆ ನೂರಾಗಿ ನಿನ್ನೆಡೆಗೆ ಹಿಂದಿರುಗಿ ಬರುವುದು ಸೂರ್ಯನಷ್ಟೇ ಸತ್ಯ!**

ಆದುದರಿಂದ, ಹೇ ಮಾನವಾ...

॥ **ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್** ॥

ರಾಮಬಾಣ:

**ಗೋವು + ನಾವು = ಸ್ವರ್ಗ**

**ಗೋವು + ಸಾವು = !!**??

[ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿಯವರ ಬ್ಲಾಗ್ ಜಾಲತಾಣದ ವಿಳಾಸ – http://hareraama.in]